


ಗಿರೀಶ ಕಾರ್ನಾಡರ ಒಡನಾಡಿ ಮತ್ತು ಅವರ ಎಲ್ಲ ಪುಸ್ತಕಗಳನ್ನು ಪ್ರಕಟಿಸಿದ ಧಾರವಾಡದ 'ಮನೋಹರ ಗ್ರಂಥಮಾಲೆ'ಯ **ರಮಾಕಾಂತ ಜೋಶಿ** ನೆನಪುಗಳು.

# ವಿಶ್ವಕನ್ನಡಿಗ—ಅಪೂರ್ವ ಸಾಧಕ

ಚಿತ್ರ: ಆನಂದ ಬಕ್ಷಿ



ಪ್ರಜಾವಾಣಿ 'ದೀಪಾವಳಿ ವಿಶೇಷಾಂಕ–2013' ಸಂಚಿಕೆಯ ಸಂವಾದ ಕಾರ್ಯಕ್ರಮದಲ್ಲಿ ಚಂದ್ರಶೇಖರ ಕಂಬಾರ, ಯು.ಆರ್. ಅನಂತಮೂರ್ತಿ ಜೊತೆ ಕಾರ್ನಾಡರು

ಗಿರೀಶ ಕಾರ್ನಾಡರ ಜೀವಮಾನದ ಸಾಧನೆಯನ್ನು ನೋಡಿದರೆ, ಅವರು ಅತ್ಯುನ್ನತ ಸ್ಥಾನದವರೆಗೆ ಮೇಲೇರಿ, ಧಾರವಾಡಕ್ಕೂ, ಕರ್ನಾಟಕಕ್ಕೂ ಮತ್ತು ಕನ್ನಡಕ್ಕೂ ವಿಶ್ವಸಾಹಿತ್ಯದಲ್ಲಿ ಒಂದು ಸ್ಥಾನವನ್ನು ಒದಗಿಸಿಕೊಟ್ಟರು ಎನ್ನುವುದು ಕನ್ನಡಿಗರೆಲ್ಲರ ಅಭಿಮಾನದ ಸಂಗತಿ. ನನಗೆ ಗಿರೀಶರ ಸಂಪರ್ಕ 1960ರಲ್ಲಿ ಮನೋಹರ ಗ್ರಂಥಮಾಲೆಯ ಮೂಲಕ ಆಯಿತು. ನನ್ನ ತಂದೆ ಜಿ.ಬಿ. ಜೋಶಿ ಗ್ರಂಥಮಾಲೆಯ ಸಂಸ್ಥಾಪಕರು, ಸಂಪಾದಕರು ಮತ್ತು ಪ್ರಕಾಶಕರು. ಚಿಕ್ಕಂದಿನಿಂದಲೇ ಹಿರಿಯ ಸಾಹಿತಿಗಳ ನಿಕಟ ಪರಿಚಯದಿಂದ ನನ್ನ ಜ್ಞಾನ ವಿಸ್ತಾರ ಸಹಜವಾಗಿ ಬೆಳೆದಿತ್ತು. ಗಿರೀಶರು ತಮ್ಮ ಪ್ರಥಮ ನಾಟಕ 'ಯಯಾತಿ'ಯ ಹಸ್ತಪ್ರತಿಯನ್ನು ಜಿ.ಬಿ. ಜೋಶಿಯವರ ಕೈಯಲ್ಲಿರಿಸಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದ್ದರು. 1956ರಿಂದ 1958ರವರೆಗೆ ನಮ್ಮ ಮನೆಯಲ್ಲಿದ್ದು ಎಂ.ಎ. ಮಾಡಿದ ಕೀರ್ತಿನಾಥ ಕುರ್ತಕೋಟಿಯವರು ಗುಜರಾತಿನ ವಲ್ಲಭ ವಿದ್ಯಾನಗರದ ವಿ.ಪಿ. ಕಾಲೇಜಿನಲ್ಲಿ